

ಸ್ಥಳೀಕನ ಸ್ಥಳೀಯ ಜ್ಞಾನದ ಮೇಲೆ ಅವಲಂಬಿತವಾಗಿತ್ತು. ಹಾಗಾಗಿ ನನ್ನ ಪ್ರವೇಶಾತಿಗೆ ನಾಲ್ಕು ಜನ ಸೀನಿಯರ್‌ಗಳು ಕಾರಣ. ಆದ್ರೆ ಅವರ್ಯಾರು ಅಂತ ನೆನಪಿಲ್ಲ. ಅದೇ ರೀತಿ ನನ್ನ ಮತ್ತು ನನ್ನ ತಂದೆಯ ಮರು ನಾಮಕರಣಕ್ಕೆ ಸಹಕರಿಸಿದವರು ಕೂಡ.

ನಮ್ಮ ಶಾಲೆಯಲ್ಲಿ ಇದ್ದ ಆಸ್ತಿಯೆಂದರೆ ಮಂಗಳೂರು ಹೆಂಚಿನ ಎರಡು ಕೊಠಡಿ, ಅದಕ್ಕೆ ಕಿಟಕಿ ಬಾಗಿಲುಗಳು. ಅದರೊಳಗೆ ಮಣೆ, ಒಂದು ಮರದ ಕುರ್ಚಿ, ಬೆಂಚ್ ಮತ್ತು ಟೇಬಲ್. ಅದರ ಮೇಲೆ ಒಂದು ಬಿದಿರಿನ ಕೋಲು. ಒಂದು ಮರದ ಅಲ್ಮೇರಾ ಮತ್ತು ಅದರ ಒಳಗೆ ಹಾಜರಾತಿ ಮತ್ತು ಪ್ರವೇಶಾತಿ ದಾಖಲೆ ಪುಸ್ತಕ. ಅದಕ್ಕೊಂದು ಬೀಗ. ಗೋಡೆಯ ಮೇಲೆ ಗಾಂಧೀಜಿ ಫೋಟೊ. ಮೂಲೆಯಲ್ಲಿ ತೆಂಗಿನಗರಿ ಪೊರಕೆ. ಇಷ್ಟಿದ್ದರೂ ನಮ್ಮ ಶಾಲೆ ಮಾಸ್ತರರು ಸ್ಕೂಲ್ ಕೀ ಯಾರಿಗೂ ಕೊಡುತ್ತಿರಲಿಲ್ಲ. ಮೊದಲು ಕೀಯನ್ನು ಒಂದು ಮನೆಯಲ್ಲಿ ಕೊಡುತ್ತಿದ್ದರು. ಊರಿನಲ್ಲಿ ಗಾರೆ ನೆಲ ಇದ್ದಿದ್ದು ಎರಡು ಮನೆಗಳಲ್ಲಿ ಮಾತ್ರ. ಒಂದು ಖಾಸಗಿ ಮನೆ ಮತ್ತು ಶಾಲೆ, ಬೇಸಿಗೆಯಲ್ಲಿ ಗಾರೆ ನೆಲ ತಣ್ಣಗಿರುತ್ತದೆ ಎಂದು ಊರಿನವರು ರಾತ್ರಿ ಮಲಗಲು ಶುರು ಮಾಡಿದ್ದರಂತೆ. ಅಂದಿನಿಂದ ಸ್ಕೂಲ್ ಕೀ ಮಾಸ್ತರ ಜೇಬು ಸೇರಿತು.

ನಮ್ಮ ಶಾಲಾ ಮಾಸ್ತರ್ ರಾಯರು ಬಹಳ ವಿಶೇಷ ವ್ಯಕ್ತಿತ್ವ. ನಾನು ನೋಡಿದ ಮೊದಲ ಶುಭ್ರ ಶ್ವೇತ ವಸ್ತ್ರಧಾರಿ. ಬಿಳಿ ಅಂಗಿ ಮತ್ತು ಪಂಚೆ. ಬೇರೆ ಉಡುಗೆ ತೊಟ್ಟಿದ್ದೇ ನೋಡಿಲ್ಲ. ಪಕ್ಕದ ಹೋಬಳಿ ಕೇಂದ್ರದಲ್ಲಿ ವಾಸ್ತವ್ಯ. ಬಸ್ಸಿನಲ್ಲಿ ಬರುತ್ತಿದ್ದರು. ಬಸ್‌ನಿಂದಿಳಿದು ಒಂದು ಕಿಲೋಮೀಟರ್ ಕಾಲ್ನಡಿಗೆ ಪಯಣ ಶಾಲೆಗೆ. ಅಕಸ್ಮಾತ್ ಬಸ್ ಸಿಗಲಿಲ್ಲ ಅಂದ್ರೆ ಸೈಕಲ್ ತುಳಿದು ಬರುತ್ತಿದ್ದರು. ಈಗಿನಂತೆ ಸಮಯಕ್ಕೆ ಸರಿಯಾಗಿ ಬೆಲ್ ಹೊಡೆಯಬೇಕು, ಬಾಗಿಲು ತೆಗೆಯಬೇಕು ಎಂಬ ನಿಯಮ ಇರಲಿಲ್ಲ. ಮಾಸ್ತರರು ಬಂದ್ರೆ ಸ್ಕೂಲ್. ಬಾಗಿಲು ತೆಗೆದಾಗ್ಲೆ ಕ್ಲಾಸ್. ಇಲ್ಲ ಅಂದ್ರೆ ಸ್ಕೂಲ್ ಇಲ್ಲ. ಕ್ಲಾಸ್ ಇಲ್ಲ. ಬೆಲ್ ಇಲ್ಲ. ಆದರೆ ಬಿಲ್ ಇತ್ತು ಅನ್ಸುತ್ತೆ. ಮಾಸ್ತರ್ ಬಂದ ನಂತರವೇ ಬಾಗಿಲು ತೆಗೆದು ಕಸ ಹೊಡೆಯುತ್ತಿದ್ದೆವು.

ಒಂದನೇ ತರಗತಿಗೆ ಹೋಗಿ ಕೂತ ಜಾಗ ಸ್ಕೂಲ್ ಡ್ರಾಪ್‌ಔಟ್ ಅಥವಾ ಪಾಸಾಗಿ ಬೇರೆ ಸ್ಕೂಲ್‌ಗೆ ಹೋಗುವವರಿಗೂ ಒಂದೇ ಸೀಟ್. ಸವರ್ಣೀಯವರಿಗೆ ಮಾತ್ರ ಮಣೆ. ಒಬ್ಬ ಪರಿಶಿಷ್ಟ ಜಾತಿ ಹುಡುಗ ಇದ್ದ. ಪಾಪ, ಪ್ರತ್ಯೇಕವಾಗಿ ಕೂರಲು ಅವನೇ ಗೋಣಿಚೀಲ ತರಬೇಕಿತ್ತು. ಮೂರು ವರ್ಷದ ನಂತರ ಶಾಲೆಗೆ ಬರಲಿಲ್ಲ. ಅವರವ್ವನ ಜೊತೆ ಕೂಲಿಗೆ ಹೋಗ್ಬಿಟ್ಟ. ಈಗ ಬೆಂಗಳೂರಿನಲ್ಲಿ ಸ್ವಲ್ಪ ಸ್ಥಿತಿವಂತ ಸ್ಥಿತಿಯ ಜೀವನ ನಡೆಸುತ್ತಿದ್ದಾನೆ.

ನಮ್ಮ ಶಾಲೆ ಒಂದು ರೀತಿಯ ಓಪನ್ ಥಿಯೇಟರ್, ಮನಸ್ಸಿದ್ದಷ್ಟು ಕಾಲ ಕ್ಲಾಸ್ ರೂಂನಲ್ಲಿ ಕೂರಬಹುದಿತ್ತು. ಬೇಸರವೆನಿಸಿದಾಗ ಕಿರುಬೆರಳು ತೋರಿಸಿ ಮೂತ್ರ ವಿಸರ್ಜನೆಗೆಂದು ಹೊರಗೆ ಹೋಗಬಹುದಿತ್ತು. ಬಯಲು ಶೌಚಾಲಯ, ಅರ್ಧ ಗಂಟೆ ವಿರಾಮ ಸಿಗುತ್ತಿತ್ತು. ಇನ್ನು ಹೆಚ್ಚಿನ ವಿರಾಮ ಬೇಕಿದ್ದರೆ ತೋರು ಬೆರಳು ಮತ್ತು ಮಧ್ಯದ ಬೆರಳನ್ನು ಇಂದಿನ ರಾಜಕಾರಣಿಗಳು ವಿಜಯದ ಸಂಕೇತವೆಂದು ತೋರಿಸುವ ಬದಲು ಬೆರಳುಗಳನ್ನು ಮಡಚಿ ಉಲ್ಟಾ ತೋರಿಸಿ ಸಾ ಎಂದಿದ್ದರೆ ಕನಿಷ್ಠ ಒಂದು ಗಂಟೆ ವಿರಾಮ ಸಿಗುತ್ತಿತ್ತು. ಏಕೆಂದರೆ ತೋಪು ಮತ್ತು ಕಟ್ಟೆ ಶಾಲೆಯಿಂದ ದೂರ ಇದ್ದವು.

ಸರ್ಕಾರವಿನ್ನು ಯೂನಿಫಾರಂ, ಶೂ, ಸಾಕ್ಸ್, ಬಿಸಿಯೂಟ ಯೋಜನೆ ಜಾರಿಗೆ ತಂದಿರಲಿಲ್ಲ. ಮೊದಲೆರಡು ವರ್ಷದ ಗಂಡು ಮಕ್ಕಳು ಸೊಂಟದ ಕೆಳಗೆ ದಿಗಂಬರರೇ ಹೆಚ್ಚು. ಆಗೆಲ್ಲಾ ಅದೆಲ್ಲಾ ನಮಗೆ ಅಂಜಿಕೆ ವಿಷಯವಲ್ಲ. ಎಲ್ಲಾ ಸಾದಾಸೀದ ಬದುಕು. ಸಣ್ಣ ಮಕ್ಕಳು ಮೂತ್ರ ಕೂಡ ಮಾಡಿದ್ದರೆ ಬಿಂದಿಗೆಯಲ್ಲಿ ನೀರು ತಂದು ಕಸ ಗುಡಿಸುವ ತೆಂಗಿನಗರಿ ಪೊರಕೆಯಿಂದ ಸ್ವಚ್ಛ ಮಾಡುತ್ತಿದ್ದೆವು. ಬೆಳ್ಳಿಗ್ಗೆ ಮನೆಯಲ್ಲಿ ರಾಗಿಮುದ್ದೆ ತಿಂದು ಬರುತ್ತಿದ್ದ ನಮಗೆ ತಣ್ಣಗಿನ ಗಾರೆ ನೆಲ ಸುಖದ ಸೋಪಾನ. ಸುಖ ನಿದ್ರೆ. ಕೆಲವರಿಗೆ ಶೀತದಿಂದ ಮೂಗಿನಲ್ಲಿ ಗೊಣ್ಣೆ. ಹರಿದ ಮಾಸಿದ ಅಂಗಿಯ ಮೇಲೆ ಹೆಚ್ಚಿನ ಭಾರ ಹಾಕುತ್ತಿದ್ದೆವು.

ಈಗಿನಂತೆ ನಮಗೆ ವೇಳಾಪಟ್ಟಿ, ಪೀರಿಯಡ್, ಮಣ ತೂಕದ ಬ್ಯಾಗ್